**<u>ದಿನಾಂಕಃ 02.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ- ವಾದಿ ಪರ ಶ್ರೀ ಜಿ.ವಿ.ಎನ್. ವಕೀಲರಿಂದಃ</u>**

1) ಮಂಜುಳ, ಇಂದ್ರಾಣಿ ಮತ್ತು ನಾನು ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನಾಮಕಾವಸ್ತೆಗಾಗಿ ಕ್ರಯದ ಕರಾರು ಪತ್ರಗಳನ್ನು ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಇಂದ್ರಾಣಿ ಮತ್ತು ನಾನು ದಾವಾ ಸ್ವತ್ತಿನ ಕಾನೂನುಬದ್ಧ ಮಾಲೀಕರು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಇಂದ್ರಾಣಿ ರವರು ಈ ಹಿಂದೆ ದಾವಾ ಸ್ವತ್ತಿಗೆ ಕಾನೂನುಬದ್ಧ ಹಕ್ಕುದಾರರು ಮತ್ತು ಸ್ವಾಧೀನದರಾರರು ಆಗಿರಲಿಲ್ಲ ಎಂದರೆ ಸರಿಯಲ್ಲ. ವಾದಿ ಮಂಜುಳಾ ಮತ್ತು ಇಂದ್ರಾಣಿ ರವರ ಮೇಲೆ ಈ ಪ್ರಸ್ತುತ ದಾವೆಯನ್ನು ಹೂಡಿರುತ್ತಾರೆ ಎಂಬ ವಿಚಾರ ನನಗೆ ತಿಳಿದಿದ್ದರೂ ಸಹ ನಾನು ಉದ್ದೇಶ ಪೂರ್ವಕವಾಗಿ 2ನೇ ಪ್ರತಿವಾದಿ ಇಂದ್ರಾಣಿ ರವರಿಂದ ಸುಳ್ಳು ಕ್ರಯ ಪತ್ರ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ವಾದಿ, 1 ಮತ್ತು 2ನೇ ಪ್ರತಿವಾದಿಗಳ ಜೊತೆ ನಾನು ಶಾಮೀಲಾಗಿ ವಾದಿಯ ಹೆಸರಿಗೆ ದಾವಾ ಸ್ವತ್ತಿನ ಮೇಲೆ ಮಾಡಿಕೊಟ್ಟಿರುವ ಕ್ರಯ ಕರಾರು ಪತ್ರವನ್ನು ಅನೂರ್ಜಿತಗೊಳಿಸುವ ಸಲುವಾಗಿ ಸುಳ್ಳು ಕ್ರಯ ಪತ್ರವನ್ನು ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. 1 ಮತ್ತು 2ನೇ ಪ್ರತಿವಾದಿಗಳು ಹಾಗೂ ನಾನು ವಾದಿಯ ಹೆಸರಿಗೆ ದಾವಾ ಸ್ವತ್ತಿನ ಕುರಿತು ಶುದ್ಧ ಕ್ರಯ ಪತ್ರ ಬರೆದುಕೊಡಲು ಬಾದ್ಯಸ್ಥರಾಗಿರುತ್ತವೇ ಎಂದರೆ ಸರಿಯಲ್ಲ. ದಿಃ14.08.2012 ಮತ್ತು 09.02.2015 ರಂದು ಮಾಡಲಾದ ಕ್ರಯದ ನಡವಳಿಕೆಯನ್ನು ವಾದಿಗೆ ಬಂಧನಕಾರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು 1 ಮತ್ತು 2ನೇ ಪ್ರತಿವಾದಿಗಳ ಜೊತೆ ಶಾಮೀಲಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ, ಚನ್ನಪಟ್ಟಣ.**